## ಕಾಗದದ ಹಂಸ

ಶಿರಸಿಯಲ್ಲಿ ನಡೆದ ಕ್ರಾಫ್ಟ್ ಪ್ರದರ್ಶನದಲ್ಲಿ ಈ ಪೇಪರ್ ಹಂಸ ಕಂಡು ಬಂತು. ಕಾಗದವನ್ನು ಕ್ರಮಬದ್ಧವಾಗಿ ಮಡಚಿ ಒಂದಕ್ಕೊಂದು ಸಿಕ್ಕಿಸಿ ಹಂಸದ ಆಕಾರಕ್ಕೆ ತಂದವರು ಅಲ್ಲಿನ ವಿದ್ಯಾರ್ಥಿಗಳು. ಇದು ಜಪಾನಿನ ಕಲೆ. ಈ ಕಲೆಗೆ 'ಓರಾಗಮಿ' ಎಂದು ಕರೆಯುತ್ತಾರೆ. ಅನುಪಯುಕ್ತ ಕಾಗದ ಬಳಸಿ ಅಲಂಕಾರವಾಗಿ ನಿರ್ಮಿಸಿದ ವಿದ್ಯಾರ್ಥಿಗಳು ಅಭಿನಂದನಾರ್ಹರು.

■ **ಗಣಪತಿ ಕಂಚಿಪಾಲ, ತೇಲಂಗಾರ**





## ಬೇರು – ಬೊಡ್ಡೆಯ 'ಪ್ರತಿಮೆ'

ಶಿವಮೊಗ್ಗ ಜಿಲ್ಲೆಯ ಸಾಗರದ ಗೋಟಗಾರಿನ ಕೃಷಿಕ ಗಾಲಿ ಗಣಪತಿ ಅವರಿಗೆ ಕಲಾತ್ಮಕವಾಗಿರುವ ಬೇರು ಬೊಡ್ಡೆಗಳನ್ನು ಹುಡುಕಿ ತಂದು ಸಂಗ್ರಹಿಸಿಡುವ ಹವ್ಯಾಸ. ಅವರ ಸಂಗ್ರಹದ ನೂರಾರು ಕಲಾಕೃತಿಗಳಲ್ಲಿ ಗಮನ ಸೆಳೆಯುವ ಒಂದು ಆಕಾರವೇ ಈ ಚಿತ್ರದಲ್ಲಿ ಕಾಣುತ್ತಿರುವ ಕಲಾಕೃತಿ. ಇದು ಇಂದಿರಾ ಗಾಂಧಿಯನ್ನು ಕೊಂಚ ಹೋಲುವಂತೆ ಕಾಣುತ್ತದೆ. ಇದನ್ನು ಕಾಷ್ಠ ಶಿಲ್ಪವಾಗಿ ಅರಳಿಸಿ ನಿಲ್ಲಿಸಿದ್ದಾರೆನೋ ಎಂಬಷ್ಟು ಸಹಜವಾಗಿ ಈ ಬೇರು ಬೊಡ್ಡೆಯ ಆಕಾರ ಮೂಡಿದೆ. ಇದರಲ್ಲಿ ಆಧಾರದ ಮರದ ಚೌಕಟ್ಟು ಮಾತ್ರ ಮನುಷ್ಯ ನಿರ್ಮಾಣ, ಉಳಿದೆಲ್ಲವೂ ಪ್ರಕೃತಿ ಸಹಜ ರಚನೆ. ಇಂದಿರಾ ಗಾಂಧಿಯ 'ಹೆರ್‌ಸ್ಟೈಲ್' ಕೂಡ ಈ ಕಲಾಕೃತಿಯಲ್ಲಿ ಅಷ್ಟೇ ಸಹಜವಾಗಿ ರೂಪುಗೊಂಡಿರುವುದು ಪ್ರಕೃತಿ ವಿಸ್ಮಯ ಎನ್ನೋಣವೆ?

■ **ಜಿ. ಅರ್ಚನಾ ಹೆಗಡೆ, ಶಿರಸಿ**

## ಮಿಲಿಟರಿ ಚಿಟ್ಟೆ

ಪ್ರಕೃತಿಯ ವಿಸ್ಮಯಗಳು, ವಿಚಿತ್ರ ಘಟನೆಗಳು ಮಾನವನ ಕುತೂಹಲಕ್ಕೆ ಕಾರಣ. ನಿಸರ್ಗದ ಮಡಿಲಿನಲ್ಲಿ ಆಪ್ತವಾಗಿ ಸುಳಿದಾಡುವ ಜೀವವೈವಿಧ್ಯಕ್ಕೆ ಆಗಾಗ ಅಚ್ಚರಿ ಮೂಡಿಸುತ್ತಿರುತ್ತದೆ. ಕಾಡಿನಲ್ಲಿ ಅಡಗುವ ನಕ್ಸಲರ ಅಂತ್ಯಕ್ಕಾಗಿ ಅದೇ ನಿಸರ್ಗದ ಮಡಿಲಿನಲ್ಲಿ ಬಂದೂಕು ಹಿಡಿದು ಮಿಲಿಟರಿ ಪಡೆಗಳು ಸುಳಿದಾಡುತ್ತಾರೆ. ಸೈನಿಕರು ಧರಿಸುವ ಬಟ್ಟೆಯನ್ನೇ ತನ್ನ ಮೈಬಣ್ಣವಾಗಿಸಿಕೊಂಡಂತೆ ಕಾಣುವ ಚಿಟ್ಟೆಯೊಂದು ಕ್ಯಾಮೆರಾ ಕಣ್ಣಿಗೆ ಸಿಕ್ಕಿಬಿದ್ದಿದೆ. ಮಿಲಿಟರಿ ಯೋಧರ ಸಮವಸ್ತ್ರ ಧರಿಸಿದಂತೆ ಕಾಣುವ ಈ ಚಿಟ್ಟೆ ನೋಡುಗರನ್ನು ಆಕರ್ಷಿಸಿ, ಹುಬ್ಬೇರುವಂತೆ ಮಾಡುತ್ತದೆ.

■ **ಕುಮಾರ್ ಪೆರ್ನಾಜೆ, ಪುತ್ತೂರು**

